ಟ್ರಾನ್ಸ್‌ಫರ್ ಮಾಡಿಸಿದ್ದರಿಂದ ಇವತ್ತು ಕೇಳುವವರು ಇಲ್ಲ. ಸ್ವಾಮಿ, ನಮ್ಮ ಊರಿನಲ್ಲಿ ಎಲ್ಲರನ್ನೂ ಸಾಯಿಸುತ್ತಾರೆ. ನಾಳೆ ನಮಗೆ ಏನು ಆಗುತ್ತದೆ ಎಂಬುದು ಗೊತ್ತಾಗುತ್ತಿಲ್ಲ. ಇದನ್ನು ನಾವ ಕೇಳಬಾರದಾ, ನಮ್ಮ ನಮ್ಮ ಕಾನ್ಸಿಟ್ಯೂಯೆನ್ಸಿನಲ್ಲಿ ಆಗುತ್ತಿರುವ ತೊಂದರೆಗಳನ್ನು ಕೇಳಬಾರದೆ? ನಾವು ಏನಾದರೂ ತಪ್ಪು ಮಾಡಿದ್ದೇವಾ? ಏನು ಮಾಡುತ್ತೇನೆಂದು ನೋಡು ಎಂದು ಫೋನ್ ಮಾಡಿ ಹೇಳಿ, ಅವರ ಮನೆಗೆ ಹೋಗಿ ಹೊಡೆದು ಸಾಯಿಸಿದ್ದಾರೆ ಇನ್ನು ಸ್ವಲ್ಪದರದಲ್ಲಿ ಅವರು ಉಳಿದುಕೊಂಡಿದ್ದಾರೆ. ಅದಕ್ಕೆ ತಾವು ಏನು ಮಾಡುತ್ತೀರೆಂದು ತಮ್ಮ ಮೂಲಕ ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನನಗೆ ನೋಟೀಸಿಗೆ ಈಗ ಸಭೆಯಲ್ಲಿ ಬಂದಿರುತ್ತದೆ.

ಅಧ್ಯಕ್ಷರು : ನಿನ್ನೆಯೇ ದಿವಸ ತಮಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅದು ನನಗೆ ಬಂದಿಲ್ಲ, ಅದು ಆಯಿತು, ಈಗ ನನ್ನ ನೋಟೀಸಿಗೆ ಬಂದಿದೆ, ನಾನು ತಕ್ಷಣ ನಾನು ಸಂಬಂಧಪಟ್ಟಂಥ ಎಸ್‌ಪಿ ಯವರಿಗೆ ನಮ್ಮ ಡಿಜಿಪಿ ಯವರ ಮುಖಾಂತರ ಮಾತನಾಡಿಸಿ ಏನೇನು ವ್ಯವಸ್ಥೆಯನ್ನು ಮಾಡಬೇಕು, ಯಾರು ತಪ್ಪಿತಸ್ತರಿದ್ದಾರೋ ಅವರ ವಿರುದ್ಧ ಕ್ರಮ ಜರುಗಿಸುವುದಕ್ಕೆ ಹೇಳುತ್ತೇನೆ.

ವಿಷಯ: (ಇ) ಹೈದರಾಬಾದ್ ಕರ್ನಾಟಕ ಭಾಗಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಲು ಸಂವಿಧಾನ ಆರ್ಟಿಕಲ್ 371 ಕ್ಕೆ ತಿದ್ದುಪಡಿ ಮಾಡಲು ಒತ್ತಾಯಿಸಿ ನಿರ್ಣಯ ಅನುಮೋದಿಸುವ ಬಗ್ಗೆ

ಶ್ರೀ ಎನ್.ಎಸ್. ಬೋಸರಾಜ್ (ಮಾನ್ವಿ) :- ಮಾನ್ಯ ಅಧ್ಯಕ್ಷರೆ, ಹಿಂದುಳಿದ ಪ್ರದೇಶಗಳಿಗೆ ವಿಶೇಷವಾದ ಸ್ಥಾನಮಾನ ಕಲ್ಪಿಸಲು 371 ನೇ ಆರ್ಟಿಕಲ್‌ನ್ನು ತಿದ್ದುಪಡಿ ಮಾಡಿ ಕೇಂದ್ರ ಸರ್ಕಾರದಿಂದ, ವಿಶೇಷ ಸ್ಥಾನಮಾನವನ್ನು ಕಲ್ಪಿಸುವ ಒಂದು ಪ್ರಸ್ತಾವನೆ ಈಗಾಗಲೇ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಹೋಗಿ ಕಾರಣಾಂತರಗಳಿಂದ ಇನ್ನೂ ಆ ವಿಷಯವನ್ನು ಅನುಮೋದನೆ ಪಡೆಯದಿರುವ ಕಾರಣ ಈಗಾಗಲೇ ಈ ವಿಷಯ ಮೇಲ್ಮನೆಯಲ್ಲಿ ಪ್ರಸ್ತಾವನೆಯಾಗಿ ಒಂದು ರೆಸ್‌ಲ್ಯೂಶನ್ ಆಗಿದೆ ಎಂದೂ ಕೂಡ ತಿಳಿದು ಬಂದಿದೆ. ಹಾಗಾಗಿ ಹಿಂದುಳಿದ ಪ್ರದೇಶವಾದ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಇದು ಈ 371 ನ್ನು ಆರ್ಟಿಕಲ್ ತಿದ್ದುಪಡಿ ಮಾಡುವ ಒಂದು ಪ್ರಸ್ತಾವನೆಗೆ ಈ ಸದನದಲ್ಲಿ ಒಂದು ರೆಸೆಲ್ಯೂಶನ್ ಮಾಡುವುದರ ಮುಖಾಂತರ ಇದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಮ್ಮ ವಿನಂತಿ ಇದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :- ಮಾನ್ಯ ಅಧ್ಯಕ್ಷರೆ, ಅವರು ಕೇಳಿರತಕ್ಕಂಥ ವಿಷಯ ಬಹಳ ಸೂಕ್ಷ್ಮವಾಗಿದೆ. ಇದು ಬಹಳ ತಡವಾಗಿದೆ ಇದಕ್ಕೆ ಈಗಾಗಲೇ ಮಹಾರಾಷ್ಟ್ರದಲ್ಲಿ ಆಂಧ್ರಪ್ರದೇಶದಲ್ಲಿ ಆಗಿ ವರ್ಷಾನುಗಟ್ಟಲೆಯಾಗಿದೆ.

(ಗೊಂದಲ)

ಅಧ್ಯಕ್ಷರು :- ಒಂದು ರೆಸೆಲ್ಯೂಶನ್ ಮುಖಾಂತರ ಬೇಕಾದರೆ ಬರೆದು ಕೊಡಲಿ, ನೋ ಅಬ್ಜೆಕ್ಷನ್, ಈ ವಿಷಯವನ್ನು ಝೀರೋ ಅವರ್‌ನಲ್ಲಿ ಇಡುತ್ತೇವೆ. ನೀವು ರೆಸಲ್ಯೂಶನ್ ಬರೆದುಕೊಡಿ. ಟೈಮ್ ಇದ್ದರೆ ಅದನ್ನು ಇವತ್ತೇ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಇದರ ಬಗ್ಗೆ ಮಾನ್ಯ ಖರ್ಗೆ ಸಾಹೇಬರಿಗೂ ಗೊತ್ತಿದೆ. ಆರ್ಟಿಕಲ್ 371 ಗೊತ್ತಿಲ್ಲವೆಂದರೆ ಹೇಗೆ? ನಾವು ಪದೇ ಪದೇ ಒತ್ತಾಯ ಮಾಡುತ್ತಿದ್ದೇವೆ, ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ, ವಿಶೇಷವಾದ ಸೌಲಭ್ಯಗಳನ್ನು ಒದಗಿಸಿಕೊಡಿ...

ಅಧ್ಯಕ್ಷರು:- ಸಕ್ರಮವಾಗಿ ಅದನ್ನು ಯಾವ ರೀತಿಯಾಗಿ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಬರೆದು ಕೊಡಿ, ಈ ಕೆಲಸ ಶೂನ್ಯವೇಳೆಯಲ್ಲಿ ಮಾಡಲು ಆಗುತ್ತದೆಯೇ? ತಾವು ಬರೆದು ಕೊಡಿ. ಟೈಮ್ ಇದ್ದರೆ ಅದನ್ನು ಇವತ್ತೇ ತೆಗೆದುಕೊಳ್ಳೋಣ. I have no objection ಕಾನೂನಿನ ಪ್ರಕಾರ ತಾವು ಏನು ಬೇಕಾದರೂ ಮಾಡಿಕೊಳ್ಳಿ ಎಂದು ಹೇಳುತ್ತಿದ್ದೇನೆ ದಯವಿಟ್ಟು ಬರೆದುಕೊಡಿ. ಸುಮ್ಮನೆ ಝೀರೋ ಅವರ್‌ನಲ್ಲಿ ಎತ್ತಿಬಿಟ್ಟರೆ ಹೇಗೆ?

(ಗೊಂದಲ)

2. ನಿಯಮ 69 ರ ಮೇರೆಗೆ

ವಿಷಯ:- ಮಾಜಿ ಸಚಿವರಾದ ಶ್ರೀ ಹೆಚ್. ನಾಗಪ್ಪನವರ ಅಪಹರಣ ಮತ್ತು ದುರಂತ ಸಾವಿನ ಬಗ್ಗೆ

ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) :- ಮಾನ್ಯ ಅಧ್ಯಕ್ಷರೆ, ನಾಗಪ್ಪನವರ ಹತ್ಯೆ ಪ್ರಕರಣದ ಬಗ್ಗೆ ಕಳೆದ ನಾಲ್ಕು ದಿವಸಗಳಿಂದ ಚರ್ಚೆಯಾಗುತ್ತಿದೆ, ಇವತ್ತು 5ನೇ ದಿವಸ ಚರ್ಚೆ ಪಾರ್ರಂಭವಾಗಿದೆ. ವಿರೋಧ ಪಕ್ಷದ ನಮ್ಮ ಪಕ್ಷದ ಮುಖಂಡರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ರವರಿಂದ ಪ್ರಾರಂಭವಾಗಿರತಕ್ಕಂಥದ್ದು, ಅನೇಕ ಜನ ಈ ವಿಷಯವನ್ನು ಚರ್ಚೆ ಮಾಡಿದ್ದಾರೆ. ಬಹಳ ಪ್ರಬಲವಾಗಿ ಸಮರ್ಥವಾಗಿ ಅವರ ಎಲ್ಲಾ ವಾದವನ್ನು ಮಂಡಿಸಿದ್ದಾರೆ. ಅಲ್ಲಿ ಎರಡು-ಮೂರು ಬೇಡಿಕೆಗಳನ್ನು ಇಟ್ಟು ಒಂದು ಸಿಬಿಐ ತನಿಖೆಗೆ ಕೊಡಬೇಕು, ಇನ್ನೊಂದು, ಒಬ್ಬ ಸಚಿವರ ರಾಜೀನಾಮೆ ಮತ್ತು ಹಾಕಿರತಕ್ಕಂಥ ಕೇಸ್‌ಗಳನ್ನು ವಿತ್‌ಡ್ರಾ ಮಾಡಬೇಕು ಎನ್ನತಕ್ಕದ್ದರ ಬಗ್ಗೆ ಪ್ರಬಲವಾಗಿರತಕ್ಕಂಥ ಒಂದು ವಾದವನ್ನು ಮಂಡನೆ ಮಾಡಿದ್ದಾರೆ. ಅದರ ಮಧ್ಯೆ ಮಧ್ಯೆ ಸರ್ಕಾರವೂ ಸಹ ಕೆಲವು ಪ್ರತಿವಾದವನ್ನು ಸಹ ಮಂಡನೆ ಮಾಡಿದೆ. ಇವತ್ತು ಪೂರ್ಣಮಟ್ಟದಲ್ಲಿ ಗೃಹ ಸಚಿವರು ಅಥವಾ ಮುಖ್ಯಮಂತ್ರಿಗಳು ಮತ್ತು ಕಾನೂನು ಸಚಿವರು ಪ್ರತಿವಾದವನ್ನು ಮಂಡನೆ ಮಾಡುತ್ತಾರೆ. ನನಗೆ ಕಾಡುತ್ತಿರುವ ಸಮಸ್ಯೆ ಏನೆಂದರೆ, ಈ ಜನತಂತ್ರ ವ್ಯವಸ್ಥೆ ಯಾವ ರೀತಿಯಾಗಿ ನಡೆಯುತ್ತದೆ ಎನ್ನತಕ್ಕಂಥದ್ದು. ಸಮರ್ಥವಾಗಿರತಕ್ಕಂಥ ವಾದವನ್ನು ಮಂಡನೆ ಮಾಡುತ್ತಾರೆ ಅವರು ಪ್ರತಿವಾದವನ್ನು ಮಂಡನೆ ಮಾಡುತ್ತಾರೆ, ತೀರ್ಪು ಕೊಡುವವರು ಯಾರು? 5 ದಿನಗಳ ಕಾಲ ವಿಧಾನಸಭೆಯನ್ನು ನಡೆಸುತ್ತಿದ್ದೀರಿ, ಇಷ್ಟೊಂದು ಪ್ರಬಲವಾಗಿರತಕ್ಕಂಥ ವಾದವನ್ನು ಮಂಡನೆ ಮಾಡಿದರೂ ಸಹಿತ ಯಾವುದೇ ರೀತಿಯಾದಂಥ ಉತ್ತರ ಬರಲಿಕ್ಕೆ ಆಗದಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಯಾವುದಾದರೊಂದು ಕೋರ್ಟಿನಲ್ಲಿ ವಾದ ಪ್ರತಿವಾದ ಆದಮೇಲೆ ಯಾರಾದರೂ ಒಬ್ಬರು ತೀರ್ಪು ಕೊಡುವಂಥವರು ಇರುತ್ತಾರೆ. ಅಲ್ಲಿ ಅದು ಇಲ್ಲ, ಈ ಜನತಂತ್ರ ವ್ಯವಸ್ಥೆಯಲ್ಲಿ , ಇದೇ ಇವತ್ತು ನಾವು ಚಿಂತನೆ ಮಾಡಬೇಕಾದಂಥ ಒಂದು ಪರಿಸ್ಥಿತಿ, ಇದಕ್ಕೆ ವಿಧಾನಪರಿಷತ್ತಿನಲ್ಲಿ ಈಗಾಗಲೇ ಸರ್ಕಾರ ಘೋಷಣೆ ಮಾಡಿಬಿಟ್ಟಿದೆ. ಈಗ ಅದನ್ನು ತಿದ್ದಿ ಇಲ್ಲಿ